ಸಹಕಾರವನ್ನೂ ಪಡೆದು ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ.

ಎಲೆಕ್ಟ್ರಿಸಿಟಿ ವಿಚಾರದಲ್ಲಿ ನಾನಾಗಲೇ ಹೇಳಿದಂತೆ ಎಷ್ಟೋ ಶಕ್ತಿ ಉತ್ಪತ್ತಿಯಾಗುತ್ತಿದ್ದರೂ ಮುಗಿದು ಹೋಗುತ್ತಿದೆ. ನಮಗೆ ಅಲ್ಪ ಸಲ್ಪ ಇರುವುದನ್ನೂ ಬೊಂಬಾಯಿ ಮದ್ರಾಸು ಆಂಧ್ರ ದೇಶಗಳಿಗೆ ಕೊಡುತ್ತಿದ್ದೀರಿ.

ಡಾ॥ ಆರ್. ನಾಗನಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಎಲೆಕ್ಟ್ರಿಸಿಟಿಯನ್ನು ಆಂಧ್ರ ದೇಶ, ಮದ್ರಾಸ್ ಬೊಂಬಾಯಿಗಳಿಗೆ ನರಬರಾಯಿ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ನಾವೇನಿದ್ದರೂ ಹಳೆಯ Commitment ಗಳನ್ನು ಪೂರೈಸುವುದಕ್ಕೆ ನರಬರಾಯಿ ಮಾಡುತ್ತಿದ್ದೇವೆಯೇ ಹೊರತು ಹೊಸ Commitment ಯಾವುದನ್ನೂ ಮಾಡಿಕೊಂಡಿಲ್ಲ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಮಡಕಶಿರಕ್ಕೆ ತಾವು ವಿದ್ಯುಚ್ಛಕ್ತಿ ಕೊಡುವುದಕ್ಕೆ ಯೋಜನೆ ಮಾಡಿದ್ದು ಹಿಂದಿನದೇ ಅಥವಾ ಇಂದಿನದೇ ?

ಶ್ರೀ ಆರ್. ಮುನಿಸ್ವಾಮಯ್ಯ.—ನಮ್ಮ ಕಡೆ 25 ಸೈಕಲ್ಲುಗಳ ಕರೆಂಟನ್ನು 50 ಸೈಕಲ್ಲುಗಳಿಗೆ ಪರಿವರ್ತನೆ ಮಾಡಬೇಕೆಂದು ಈಗ ನಾಲ್ಕೈದು ವರ್ಷಗಳಿಂದಲೂ ಪ್ಲಾಟ್‌ಗಳು ಎಸ್ಟಿಮೇಟುಗಳು ನಡೆಯುತ್ತಿದ್ದರೂ ಇನ್ನೂ ಮುಗಿದಿಲ್ಲ. ಎಲ್ಲಿ ನಿಧಾನವಾಗಿರುತ್ತದೆಯೋ ಗೊತ್ತಿಲ್ಲ. ಯಾವಾಗ ಕೇಳಿದರೂ ಜೋಗಿನಿಂದ ಬೆಂಗಳೂರಿನವರೆಗೆ 50 ಸೈಕಲ್ ಕರೆಂಟ್ ಲೈನನ್ನು ಹಾಕುತ್ತಿದ್ದೇವೆ, ಎಲ್ಲಾ ನಿರಾವರಿ ಯೋಜನೆಗಳಿಗೂ ಒದಗಿಸುತ್ತೇವೆ ಎಂದು ಸಾಮಾನ್ಯ ರೀತಿಯಲ್ಲಿ ಲಘುವಾಗಿ ಹೇಳುತ್ತಿರುತ್ತಾರೆ. ಮಂತ್ರಿಗಳು ಈ ವಿಷಯದಲ್ಲಿ ಇನ್ನೂ ಸ್ವಲ್ಪ ಚಟುವಟಿಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ಮಂತ್ರಿಗಳು ಚಟುವಟಿಕೆಯಾಗಿದ್ದರೆ ಕೆಲಸ ಕಾರ್ಯಗಳೂ ಚಟುವಟಿಕೆಯಿಂದ ನಡೆಯುತ್ತವೆ. ಈ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಹೆಚ್ಚಾಗಿವೆ ಎಂಬುದೇನೋ ಗೊತ್ತು; ಆದರೂ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಕಾಗದ ಪತ್ರಗಳು ಜಾಗ್ರತೆಯಾಗಿ ಮಂತ್ರಿಗಳಿಂದ ಒಪ್ಪಿಗೆ ಪಡೆದು ಹೋಗುತ್ತಿಲ್ಲ. ನಾವು ಅಸಿಸ್ಟೆಂಟ್ ಎಂಜಿನಿಯರ್, ಸೂಪರಿಂಟೆಂಡಿಂಗ್ ಎಂಜಿನಿಯರು ಮೊದಲಾದವರ ಆಫೀಸಿನಲ್ಲಿ ನೋಡಿದರೆ, ಅಲ್ಲಿಂದ ಸರ್ಕಾರಕ್ಕೆ ಬಂದಂಥ ಪ್ರಪೋಸಲ್‌ಗಳೆಲ್ಲವೂ ಬೇಗ ತೀರ್ಮಾನವಾಗದೆ ಕುಳಿತಿವೆಯೆಂದು ಗೊತ್ತಾಗುತ್ತದೆ. ಇದನ್ನು ನೋಡಿದರೆ ಸರ್ಕಾರದಲ್ಲಿ technical efficiency ಕಡಮೆಯಾಗಿದೆಯೆಂದು ಗೊತ್ತಾಗುತ್ತದೆ. ಆದ್ದರಿಂದ ಈ ಇಲಾಖೆಗೆ ಸಂಬಂಧಪಟ್ಟ ವಿಷಯಗಳು ಜಾಗ್ರತೆಯಾಗಿ ತೀರ್ಮಾನವಾಗುವಂತೆ ಮಾಡಿ, ಜೋಗಿನಿಂದ ಬೆಂಗಳೂರಿಗೆ 50 ಸೈಕಲ್ಲುಗಳ ಲೈನ್ ಹಾಕುವುದನ್ನು ಒಂದೆರಡು ತಿಂಗಳುಗಳಲ್ಲೇ ಮುಗಿಯುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ವಿದ್ಯುಚ್ಛಕ್ತಿಯ ದರದ ವಿಚಾರದಲ್ಲಿ, ತಾವೀಗ ಬನ್ನಿ ಮಿಲ್ಲು ಮುಂತಾದ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಕೇವಲ 4½ ಕಾಸಿನಂತೆ ಒದಗಿಸುತ್ತಿದ್ದೀರಿ. ದೊಡ್ಡ ಕೈಗಾರಿಕೆಗಳವರು ಕೋಟ್ಯಾಂತರ ರೂಪಾಯಿಗಳನ್ನು ಸುಲಭ ರೀತಿಯಲ್ಲಿ ಸಂಪಾದಿಸಿಕೊಳ್ಳಲು ಹೀಗೆ ಕಡಿಮೆ ದರಗಳಲ್ಲಿ ಕೊಡುವುದರಿಂದ ಅತ್ಯಕಡೆ ಕೈಯಿಂದ ಕೆಲಸ ಮಾಡುವವರಿಗೂ, ವ್ಯವಸಾಯ ಕಾರ್ಯಗಳಿಗೂ ಬಹಳ ನಷ್ಟವೂ ತೊಂದರೆಯೂ ಉಂಟಾಗುತ್ತಿದೆ. ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದಾಗಿ ಬಾಯಲ್ಲಿ ಹೇಳುತ್ತಿರುತ್ತೀರಿ. ಆದರೆ ವಾಸ್ತವವಾಗಿ ನೋಡಿದರೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಎಷ್ಟು ಕೊಡಬೇಕೋ ಅದಕ್ಕಿಂತಲೂ ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಾ ಸರ್ಕಾರಕ್ಕೂ ನಷ್ಟ ಮಾಡಿಕೊಂಡು ವಿದ್ಯುಚ್ಛಕ್ತಿ ಕೊಡುತ್ತಿರುವುದು ಸರಿಯಲ್ಲ. ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

Mr. SPEAKER.—The House will now rise and meet again at 2 O'clock to-day.

The House adjourned at Forty-five Minutes past Eleven of the Clock and reassembled at Two of the Clock.

[MR. SPEAKER in the Chair.]

QUESTIONS AND ANSWERS

Irrigation Projects in Second Five-Year Plan.

Q.—568. **Sri C. H. LINGADEVARU** (Chiknaikanahalli).—

Will the Government be pleased to state :—

(*a*) the big and small irrigation projects of the State intended to be included in the Second Five-Year Plan ;

(*b*) the estimated cost of each of them ;

(*c*) whether any such projects of Chiknaikanahalli Taluk are included ?

A.—**Sri K. HANUMANTHAIYA** (Chief Minister).—

(*a*) and (*b*) Please see statement appended below.

(*c*) Some minor Irrigation Projects of Chiknaikanahalli Taluk are also being considered for inclusion.

STATEMENT

Sl. No.	*Name of the Project*			*Estimated Cost* (Rs. in lakhs)
1	Bhadra Reservoir	...	...	1,775·00 *
2	Tunga Anicut	...	...	230·00
3	Nugu Reservoir	...	...	243·00
4	Ambligola Reservoir	...	...	56·00

(SRI K. HANUMANTHAIYA.)

Sl. No.	Name of the Project			Estimated Cost (Rs. in lakhs)
	New Schemes			
5	Kapini Reservoir Project	...	...	250·00
6	Hemavathi Reservoir Project	...	...	850·00
7	Chickole Project	...	...	21·90
8	Taraka Reservoir Project	...	...	99·50
9	Hebbahalla Project	...	...	15·08
10	Jambadahalla Project	...	...	40·00
11	Dandavathi Project	...	...	60·00
12	Yennehole Project	...	...	7·94
13	Muthuraya akere	...	...	10·00 †
14	Sagre Doddakere	...	...	13·00
15	Bhemma Reservoir	...	...	7·1
16	Arkavathi	...	...	40·0
17	Hagari Bommanahalli	...	...	79·00

* These schemes are under execution and will be in progress during the Second Plan period.

† This work is started.

ಶ್ರೀ ಸಿ. ಎಚ್. ಲಿಂಗದೇವರು.—ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೆಲವು ಮೈನರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಸೇರಿಸಲಾಗುವುದೆಂದು ಉತ್ತರದಲ್ಲಿ ಹೇಳೋಣವಾಗಿದೆ. ಹಾಗೆ ಯಾವ ಯಾವುದನ್ನು ಪಟ್ಟಿಗೆ ಸೇರಿಸಲಾಗಿದೆ?

ಶ್ರೀ ಕೆ. ಹನುಮಂತಯ್ಯ.—ಆ ಬಗ್ಗೆ ಇನ್ನೂ ಪೂರ್ತಿ ಲಿಸ್ಟ್ ತಯಾರಾಗಿಲ್ಲ. ಆಗುತ್ತಾ ಇದೆ. ತಾವು ಯಾವ ಯಾವುದನ್ನು ಸೇರಿಸಬೇಕೆಂಬುದರ ಬಗ್ಗೆ ನಲಹೆ ಕೊಟ್ಟರೆ ಅವುಗಳನ್ನು ಸೇರಿಸಲಾಗುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಆ ಲಿಸ್ಟ್ ಇನ್ನು ಎಷ್ಟು ದಿವಸಗಳಲ್ಲಿ ತಯಾರಾಗುತ್ತದೆ?

ಶ್ರೀ ಕೆ. ಹನುಮಂತಯ್ಯ.—ಇನ್ನು 6 ತಿಂಗಳೊಳಗಾಗಿ ಆಗಬಹುದು.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ತಾವು ಈಗ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದ್ದಂಥ ಮಂಗಳದ ಪ್ರಾಜೆಕ್ಟನ್ನು ಕೈ ಬಿಟ್ಟಿದ್ದರಿಂದ ತಾನೆ ಈಗ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಮುತ್ತರಾಯನ ಕೆರೆಯನ್ನು ಸೇರಿಸಿರುವುದು?

ಶ್ರೀ ಕೆ. ಹನುಮಂತಯ್ಯ.—ಹಾಗೆ ಅದನ್ನೇನೂ ಕೈಬಿಟ್ಟುಬಿಡುವುದಿಲ್ಲ. ಹಾಗೊಂದುವೇಳೆ ಮಂಗಳದ ಕೆರೆಗೂ ಕೂಡ ಸಾಕಾಗುವಷ್ಟು ದುಡ್ಡು ದೊರೆಯುವ ಹಾಗಿದ್ದರೆ ಅದನ್ನೂ ಮಾಡುತ್ತೇವೆ.

ಶ್ರೀ ಎಸ್ ಹುಚ್ಚಮಾಸ್ತಿಗೌಡ.—ಈಗ ತಾವು ಮಂಗಳದ ಕೆರೆಯನ್ನು ಎಲ್ಲಿಸಿ, ಈ ಮುತ್ತರಾಯನ ಕೆರೆಯನ್ನು ಪ್ರಾರಂಭಿಸಬೇಕೆಂದು ಹೇಳಿದ್ದೀರಿ. ಈ ಮಂಗಳದ ಕೆರೆಯನ್ನು ತಯಾರಿಸದಿರುವುದರಿಂದ ಆ ಮಾರ್ಕೋನಹಳ್ಳಿ ಬಲನಾಲೆಯ ಬೈಲಿಗೆ ನೀರು ಹತ್ತದೆ ಅಲ್ಲಿನ ರೈತರಿಗೆ ತುಂಬಾ ಅನಾನುಕೂಲವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಮಂಗಳದ ಕೆರೆಯ ಸೈಟಿನ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಬಂದಿದೆ. ಆ ಬಗ್ಗೆ ಚೀಫ್ ಇಂಜಿನಿಯರ್ ಅಡ್ವೈಜರುಗಳ ತೀರ್ಮಾನವಿನ್ನೂ ಬಂದಿಲ್ಲ, ಆದುದರಿಂದ ಅದು ಸ್ವಲ್ಪ ನಿಧಾನವಾಗಿದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈ ಬಲನಾಲೆಗೆ ನೀರನ್ನು ಕೊಡುವುದಕ್ಕೇನು ಅವರ ಅಡ್ಡಿಯಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಪ್ಲಾನಿಂಗ್ ಸಮಿತಿಯವರು ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡ ಕೆಲಸಗಳೆಲ್ಲವೂ ಪೂರ್ತಿಯಾದ ಹೊರತು ಹೊಸದಾಗಿ ಯಾವ ದೊಡ್ಡ ನೀರಾವರಿ ಕಾಂಗಾರಿಗಳನ್ನೂ ಕೈಗೊಳ್ಳಬಾರದೆಂದು ಹೇಳಿದ್ದಾರೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈಗ ಮಾರ್ಕೋನಹಳ್ಳಿ ಬಲನಾಲೆಯ ಬೈಲಿನಲ್ಲಿ ಸುಮಾರು 1,400 ಎಕರೆಗಳಿಗೆ ಈ ಮಾರ್ಕೋನಹಳ್ಳಿ ಕೆರೆಯ ನೀರು ಸಾಕಾಗುವುದಿಲ್ಲ. ಆದುದರಿಂದ ಸರ್ಕಾರದವರು ಮಂಗಳದ ಕೆರೆಯನ್ನು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಾದರೂ ಸೇರಿಸಿಕೊಳ್ಳಬೇಕೆಂದು ಮನವಿ ಮಾಡಿಕೊಂಡಿದ್ದು ತಮಗೆ ಜ್ಞಾಪಕವಿಲ್ಲವೇ ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಕೇಳಿದ್ದು ಹಾಗೆ ನನಗೆ ಜ್ಞಾಪಕವಿಲ್ಲ. ಇಲಾಖೆಯವರು ಹಾಗೆ ತಿಳಿಸಿದ್ದ ಜ್ಞಾಪಕ ನನಗಿದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಇದರ ಬಗ್ಗೆ ಪುನಃ ತಾವು ಚೀಫ್ ಇಂಜಿನಿಯರ್ ಅವರಿಂದ ಪೂರ್ಣ ವಿವರಗಳನ್ನು ತರಿಸಿಕೊಂಡು ಪರಿಶೀಲನೆ ಮಾಡಿ, ಅನುಕೂಲವಾಗುತ್ತದೆ ಎಂದು ಕಂಡುಬಂದರೆ ಮುಂದಕ್ಕೆ ಇದನ್ನು ತಾವು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ವಿವರಗಳನ್ನು ತರಿಸಿಕೊಳ್ಳುವುದಕ್ಕೇನೂ ತೊಂದರೆಯಿಲ್ಲ. ಆದರೆ ಈಗ ಬಂದಿರುವ ತೊಂದರೆಯೆಲ್ಲಾ ಹಣದ್ದೊಂದೇ.

Sri V. M. MASCARENHAS.—With reference to the schemes enumerated in the Appendix, is it not against the principle enunciated by the Finance Minister that in the Second Five-Year Plan emphasis will be given on industrial development?

Sri K. HANUMANTHAIYA.—Industrial development will no doubt receive priority consideration, but those irrigation works which have already been commenced ought to be completed.

Sri V. M. MASCARENHAS.—I am referring to new schemes.

Sri K. HANUMANTHAIYA.—Those irrigation works which have already been commenced, ought to be completed and such of those new schemes as are absolutely necessary for the area will be taken up, not on such a big scale as we took up in the First Five-Year Plan in order to meet the deficit in foodstuffs in India.

ಶ್ರೀ ಎ. ವಿ. ನರಸಿಂಹರೆಡ್ಡಿ.—ತಾವೀಗ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಬಗ್ಗೆ ಕೈಗೊಳ್ಳತಕ್ಕ ಯೋಜನೆಗಳಿಗಾಗಿ ಸುಮಾರು 100 ಕೋಟಿ ರೂಪಾಯಿಗಳು ಬೇಕಾಗುತ್ತವೆಂದು ಅಂದಾಜು ಮಾಡಿದ್ದೀರಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಹೌದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ತಾವೀಗ ಈ ನೀರಾವರಿ ಯೋಜನೆಗಳಿಗಾಗಿ ಒದಗಿಸಿರುವ 14 ಕೋಟಿ ರೂಪಾಯಿಗಳ ಮೊಬಲಗು ಬಹಳ ಕಮ್ಮಿಯಲ್ಲವೇ?

ಶ್ರೀ ಕೆ. ಹನುಮಂತಯ್ಯ.—100ಕ್ಕೆ ಲೆಕ್ಕ ತೆಗೆದು ಕೊಂಡರೆ ಇದು ಕಮ್ಮಿಯಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ತಾವೀಗ ಈ ಕೈಗಾರಿಕೆಗಳ ಅಭಿವೃದ್ಧಿಗಿಂತಲೂ ಪ್ರಥಮ ಸ್ಥಾನವನ್ನೇ ಈ ವ್ಯವಸಾಯಾಭಿವೃದ್ಧಿಗೆ ಕೊಡಬೇಕಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಹೌದು ಊಟವಾದ ಮೇಲೆ ಇತರ ಕೆಲಸಗಳನ್ನು ಮಾಡುವುದು.

ಶ್ರೀ ಬಿ. ರಾಚಯ್ಯ.—ಈ ಚಿಕ್ಕಹೊಳೆ ಪ್ರಾಜೆಕ್ಟಿನ ಕೆಲಸವನ್ನು ಬೇಗ ಕೈಗೊಳ್ಳುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ತಾವು ಕೇಳುವುದು ಈಗ ಈ ಪಟ್ಟಿಯಲ್ಲಿ ಸೇರಿದೆಯೇ?

ಶ್ರೀ ಬಿ. ರಾಚಯ್ಯ.—ಪಟ್ಟಿಯಲ್ಲಿ ಸೇರಿದೆ.

ಶ್ರೀ ಕೆ. ಹನುಮಂತಯ್ಯ.—ಬೇಗ ಕೈಗೊಳ್ಳಲಾಗುತ್ತದೆ.

Second Five-Year Plan.

Q.—667. **Sri S. GOPALA GOWDA** (Sagar—Hosanagar).—

Will the Government be pleased to state :—

(*a*) whether the Second Five-Year Plan is ready;

(*b*) if not, the stage at which it is;

(*c*) whether they have suggested to the Central Government in the matter of including Honnemaradu Project and a Scheme for the improvement of Malnad in the Second Five-Year Plan?

A.—**Sri K. HANUMANTHAIYA** (Chief Minister).—

(*a*) Not yet.

(*b*) Proposals from the Heads of Development Departments are awaited.

(*c*) (i) Yes.

(ii) The incomplete programme of the First Five-Year Plan will be carried over to the Second Five-Year Plan.

ಶ್ರೀ ಎಸ್. ಗೋಪಾಲಗೌಡ.—ಈ ಇಲಾಖೆಯ ಮೊಖ್ತೇಸರರುಗಳು ತಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಮುಂಚಿತವಾಗಿ ಅವರು ಸ್ಥಳದ ಅಗತ್ಯದ ಬಗ್ಗೆ ಯಾವ ರೀತಿ ಪರಿಶೀಲನೆ ಮಾಡುತ್ತಾರೆ? ಅವರೇನು ಅವರೇ ಸ್ವತಃ ಸಲಹೆಗಳನ್ನು ಕೊಡುತ್ತಾರೋ ಅಥವಾ ಅವರು ತಮ್ಮ ಕೈಕೆಳಗಿನ ಅಧಿಕಾರಿಗಳಿಂದ ಸಲಹೆಗಳನ್ನು ತರಿಸಿಕೊಂಡು ಆ ಮೂಲಕ ಅವರ ಅಭಿಪ್ರಾಯವನ್ನು ಕೊಡುತ್ತಾರೋ? ಈ ನಂದರ್ಭದಲ್ಲಿ ಸ್ಥಳೀಯ ಅಧಿಕಾರಿಗಳಿಂದ ಆಯಾ ತಾಲ್ಲೂಕಿನ ಅವಶ್ಯಕತೆಗಳೇನೆಂಬುದನ್ನು ಪಡೆಯುವುದನ್ನು ಆವಶ್ಯಕವಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಈ ಎರಡು ದಾರಿಗಳಿಂದಲೂ ಅವರು ಸಲಹೆಗಳನ್ನು ರೂಪಿಸಿ ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ತಾವು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯನ್ನು ತಯಾರು ಮಾಡುವಾಗ ಇದರ ಒಂದು ಟಾರ್ಗೆಟ್ಟನ್ನು ಹಳ್ಳಿಗಳ ಅಥವಾ ತಾಲ್ಲೂಕುಗಳನ್ನು ಯೂನಿಟ್ಟಾಗಿಟ್ಟುಕ್ಕೊಂಡು ಮಾಡುತ್ತೀರೋ ಅಥವಾ ಬೇರೆ ಇನ್ನಾವ ದಾದರೂ ಮಾರ್ಗದಲ್ಲಿ ಇದನ್ನು ತಯಾರು ಮಾಡುತ್ತೀರೋ?

ಶ್ರೀ ಕೆ. ಹನುಮಂತಯ್ಯ.—ಗೃಹಕೈಗಾರಿಕೆಗಳಿಗೆ ಉತ್ತೇಜನಕೊಡುವುದು, ಹೊಸ ಮಾದರಿಯ ಕಾಟೇಜ್ ಇಂಡಸ್ಟ್ರಿಗಳನ್ನು ನಡೆಸುವುದಕ್ಕೆ ಅವಕಾಶಕೊಡುವುದು ಇತ್ಯಾದಿ ಪ್ರಯತ್ನಗಳಿಂದ ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಇದರಲ್ಲಿ ಅವಕಾಶಮಾಡಿದೆ.

ಶ್ರೀ ಎಸ್. ಗೋಪಾಲಗೌಡ.—ಮಲೆನಾಡು ಅಭಿವೃದ್ಧಿಯ ಬಗ್ಗೆ ತಾವೇನಾದರೂ ಒಂದು ಯೋಜನೆಯನ್ನು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ತರುವುದಕ್ಕೆ ಅವಕಾಶಮಾಡಿದ್ದೀರಾ?

ಶ್ರೀ ಕೆ. ಹನುಮಂತಯ್ಯ.—ಇದಕ್ಕೇ ಒಂದು ಪ್ರತ್ಯೇಕವಾದ ಭರವಸೆ ಕೊಡಲು ಅವಕಾಶವಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವೀಗ ಆ ಹೊನ್ನೆಮರಡು ಮತ್ತು ಷಿಂಷಾ ಯೋಜನೆಗಳನ್ನು ಇದರಲ್ಲಿ ಕೈ ಬಿಡಲು ಕಾರಣವೇನು?

ಶ್ರೀ ಕೆ. ಹನುಮಂತಯ್ಯ.—ಹಾಗೇನೂ ಕೈಬಿಟ್ಟಿಲ್ಲ. ಈಗ ಸಧ್ಯಕ್ಕೆ ಅವುಗಳನ್ನು ತೆಗೆದು ಕೊಳ್ಳುವುದು ಸರಿಯೇ—ಅಲ್ಲವೇ ಎನ್ನುವ ವಿಚಾರದಲ್ಲಿ ಒಂದು ಸಮಿತಿಯನ್ನೇ ನೇಮಿಸಲಾಗಿದ್ದಿತು. ಆ ಸಮಿತಿಯವರು ಈಗ ಆ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡುತ್ತಿದ್ದಾರೆ. ಇದರ ಮೇರೆ ಇಂಡಿಯಾದೇಶದ ಎಕ್ಸ್‌ಪರ್ಟ್ ಸಮಿತಿಯ ಮೂರು ಜನ ಸದಸ್ಯರು ಬೇರೆ ಇಲ್ಲಿಗೆ ಬಂದಿದ್ದರು. ಅವರು ಸಹ ಇವುಗಳನ್ನೆಲ್ಲಾ ನೋಡಿಕೊಂಡು ಹೋಗಿದ್ದಾರೆ. ಅವರೆಲ್ಲರೂ ಈ ವಿಷಯದಲ್ಲಿ ಯಾವ ರೀತಿ ಅಭಿಪ್ರಾಯಪಡುತ್ತಾರೋ ಆ ರೀತಿ ಸರ್ಕಾರ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಸಿದ್ಧವಾಗಿದೆ.